೩) ಕೀಟಬಾಧೆ ತೀವ್ರವಾದಾಗ ಬೇರಿನ:ಕಾಂಡದ ಮುಖಾಂತರ ಸಸ್ಯಾಂತರ ಮಾನೋಕೋಟೋಪಾಸ್ ಕೀಟನಾಶಕವನ್ನು ಶೇಕಡ ೧೯ರ ರಿಯಾಯಿತಿ ದರದಲ್ಲಿ ಒದಗಿಸಿ ೧.೦೭ ಲಕ್ಷ ಮರಗಳನ್ನು ಡಿಸೆಂಬರ್ ೯೨ರ ಅಂತ್ಯದವರೆಗೆ ಉಪಚರಿಸಲಾಗಿದೆ.

೪) ೧೯೯೧-೯೨ ನೇ ಸಾಲಿನಲ್ಲಿ ನಿರುದ್ಯೋಗಿ ಯುವಕ:ಯುವತಿಯರ ಆಶ್ರಯದಲ್ಲಿ ೧೨೫ ಖಾಸಗೀ ಪ್ರಯೋಗ ಶಾಲೆಗಳನ್ನು ತೆರೆಯಲಾಗಿದೆ. ೧೯೯೨-೯೩ನೇ ಸಾಲಿನಲ್ಲಿ ಡಿಸೆಂಬರ್ ೯೨ರ ಮಾಹೆಯವರೆಗೆ ೩೩.೧ ಲಕ್ಷ ಪರೋಪಜೀವಿಗಳನ್ನು ಖಾಸಗೀಯವರಿಂದ (ನೂರಕ್ಕೆ ರೂ.೬.೦೦ರಂತೆ) ಪಡೆದು ಇಲಾಖೆಯ ಸಿಬ್ಬಂದಿ ಮುಖಾಂತರ ರೈತರ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

೫) ರಾಜ್ಯವಲಯದಡಿ ೨೮ (೨೪ ಸಣ್ಣ ಹಾಗೂ ೪) ದೊಡ್ಡ ಪ್ರಯೋಗ ಶಾಲೆಗಳನ್ನು ತೆರೆಯಲು ಏರ್ಪಾಡು ಮಾಡಲಾಗಿದೆ. ಈ ಯೋಜನೆಯಡಿ ವಾರ್ಷಿಕ ೨೦.೦೦ ಲಕ್ಷ ಪರೋಪಜೀವಿಗಳನ್ನು ಉತ್ಪಾದಿಸುವ ಗುರಿಯಿದೆ.

ವಿಷಯ:- ರಾಜ್ಯದಲ್ಲಿರುವ ಉದ್ಯಾನವನಗಳ ಅಭಿವೃದ್ಧಿ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ ೧೦೭:- (೫೧೯)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ಉದ್ಯಾನವನಗಳೆಷ್ಟು?

ಆ) ಬೆಂಗಳೂರು ಕಬ್ಬನ್ ಉದ್ಯಾನವನ ಹಾಗೂ ಲಾಲ್‌ಬಾಗ್ ಉದ್ಯಾನವನಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ.
(ತೋಟಗಾರಿಕೆ ಸಚಿವರು)

ಕರ್ನಾಟಕದಲ್ಲಿ ತೋಟಗಾರಿಗೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಉದ್ಯಾನವನಗಳು ಒಟ್ಟು ೬೦.

ಬೆಂಗಳೂರು ಕಬ್ಬನ್ ಉದ್ಯಾನವನ ಹಾಗೂ ಲಾಲ್‌ಬಾಗ್ ಸಸ್ಯ ತೋಟಗಳ ಸರ್ವತೋಮುಖ ಅಭಿವೃದ್ಧಿಗೆ ಕೆಳಕಂಡ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

೧. ಕಬ್ಬನ್ ಉದ್ಯಾನವನದ ದಕ್ಷಿಣಭಾಗದ ೧ನೇ ಬ್ಲಾಕ್ ಮತ್ತು ೨ನೇ ಬ್ಲಾಕ್‌ಗಳಲ್ಲಿ ಸುಮಾರು ೮೦ ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. (ಅಂದರೆ ವಿವಿಧ ವಿನ್ಯಾಸಗಳು ಲೈಟು, ಪುಟ್‌ಪಾತ್‌ಗಳ ವ್ಯವಸ್ಥೆ ಮುಂತಾದವುಗಳಿಂದ)

೨. ಕಬ್ಬನ್ ಉದ್ಯಾನವನದ ಶೇಷಾದ್ರಿ ಗ್ರಂಥಾಲಯದ ಬದಿಯಲ್ಲಿ ರಾಕರಿಗಳನ್ನು ಪುನರುಜ್ಜೀವನಗೋಳಿಸಲಾಗಿದೆ.

೩. ಲಾಲ್‌ಬಾಗ್ ಸಸ್ಯ ತೋಟದ ಸಿದ್ದಾಪುರ ಮತ್ತು ತೋಟಗಾರಿಕಾ ತರಬೇತಿ ಶಾಲೆಯ ಮಧ್ಯೆ ಇರುವ ೧೦ ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಿ ಕಳ್ಳಿ,ಕತ್ತಾಳೆ ವನ ನಿರ್ಮಿಸುವ ಕಾರ್ಯ ಬರದಿಂದ ಸಾಗಿದೆ.

೪. ಲಾಲ್‌ಬಾಗ್ ಕೆರೆಯ ಸುತ್ತಲೂ ಅಂದವನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

೫. ಲಾಲ್‌ಬಾಗ್ ಪಶ್ಚಿಮ ದ್ವಾರದ ಬಳಿ ನೀರಿನ ಚಿಲುಮೆ ಅಳವಡಿಸಿ ಅಲಂಕಾರಿಕ ಗ್ರಿಲ್‌ನ್ನು ಅಳವಡಿಸಿ ವೆಟ್ರಲ್ಲಾ ಎಂಬ ಜಪಾನ್ ದೇಶದ ಹುಲ್ಲನ್ನು ಹಾಕಲಾಗಿದೆ.

೬. ತೋಟಗಾರಿಕೆ ಮ್ಯಾಸಿಯಂ ಸ್ಥಾಪಿಸಲು ಕಾರ್ಯಭರದಿಂದ ಸಾಗುತ್ತಿದೆ.

೭. ಲಾಲ್‌ಬಾಗ್ ಸಸ್ಯ ತೋಟದಲ್ಲಿ ಸುಮಾರು ೨೦ ಮಿಲಿಯನ್ ವರ್ಷದ ಹಳೆಯದಾದ ಮರದ ಪಳಿಯುಳಿಕೆಯನ್ನು ಮದ್ರಾಸಿನ ತಿರುವಕ್ಕೆರದಿಂದ ತಂದು ಸೂಕ್ತ ರಕ್ಷಣೆ ಹಾಗೂ ಆಕರ್ಷಣೆಯವಾಗಿ ಇಡಲಾಗಿದೆ.

೮. ಹೂ ಗಡಿಯಾರದ ಸುತ್ತಾ ಸ್ನೋಪೈಟ್ ಮತ್ತು ೭ ಡ್ವಾರ್ಫ ಪ್ರತಿಮೆಗಳನ್ನು ಅಳವಡಿಸಿ ಅಂದಗೊಳಿಸಲಾಗಿದೆ.

೯. ಸ್ಯಾಂಚ್ಯು ಗಾರ್ಡ್‌ನ್‌ನಲ್ಲಿ ಬಾಲ್ ಫೌಟೇನ್ ಅಳವಡಿಸಲಾಗಿದೆ.

೧೦. ಲಾಲ್‌ಬಾಗ್‌ನಲ್ಲಿ ಗಿಡಬೀಜಗಳ ವಿನಿಮಯ ಕೇಂದ್ರ ಸ್ಥಾಪಿಸಲಾಗುವುದು.

೧೧. ೪ ದ್ವಾರಗಳಲ್ಲಿ ನಿಯೊನೆಸ್ಕೆನ್ ಬೋರ್ಡ್‌ನ್ನು ಅಳವಡಿಸಲಾಗಿದೆ . ಹಾಗೂ ಅವಶ್ಯವಿರುವ ಕೆಡೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.

೧೨. ಕೆಂಪೇಗೌಡ ಗೋಪುರದ ಸುತ್ತಲು ಸುಮಾರು ೪೦ ಎಕರೆ ಪ್ರದೇಶದಲ್ಲಿ ರಾಕ್ ಗಾರ್ಡನ್ ಅಭಿವೃದ್ಧಿ ಪಡಿಸಲಾಗುತ್ತಿದೆ.

೧೩. ಪಶ್ಚಿಮ ದ್ವಾರದ ಬಲಭಾಗದ ಹಾಗೇ ಬಿಟ್ಟಿದ್ದ ೧೦ ಎಕರೆ ಪ್ರದೇಶವನ್ನು ವಿವಿಧ ವಿನ್ಯಾಸಗಳು ಹಾಗೂ ಸನ್‌ಕನ್ ಗಾರ್ಡನ್‌ಗಳನ್ನೊಳಗೊಂಡಂತೆ ಅಭಿವೃದ್ಧಿ ಪಡಿಸಲಾಗುತ್ತಿದೆ.

ವಿಷಯ:- ನೆರೆ ಹಾವಳಿ ಒಳಪಟ್ಟಿರುವ ಪ್ರದೇಶಗಳಲ್ಲಿ ಕಂದಾಯ ವಸೂಲಾತಿರದ್ದತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೦೮:- (೫೨೦)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ತೊಂದರೆಯಾಗಿರುವ ಪ್ರದೇಶಗಳ ರೈತರುಗಳಿಂದ ಕಂದಾಯ ವಸೂಲಿ ಮಾಡುವುದನ್ನು ನಿಲ್ಲಿಸಲಾಗಿದೆಯೇ?

ಆ) ನೆರೆ ಹಾವಳಿಯ ಪರಿಹಾರವಾಗಿ ಇದುವರೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಸಹಾಯವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ
(ಕಂದಾಯ ಸಚಿವರು.)

ನೆರೆ ಹಾವಳಿಯಿಂದ ತೊಂದರೆಯಾಗಿರುವ ಪ್ರದೇಶಗಳ ರೈತರುಗಳಿಂದ ಕಂದಾಯ ವಸೂಲಿ ಮಾಡುವುದನ್ನು ಸ್ಥಗಿತಗೊಳಿಸಲು ಸೂಚಿಸಲಾಗಿದೆ.

೧೯೭೨-೭೩ನೇ ಸಾಲಿಗೆ 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ಕೇಂದ್ರ ಸರ್ಕಾರದ ಪಾಲು ಈ ಕೆಳಕಂಡತಿರುತ್ತದೆ: